ನಾನು ಪೂಜೆ ಮಾಡುವುದನ್ನು ನೋಡಿ ನಿಮಗೆ ಯಾಕೆ ಹೊಟ್ಟೆ ಕಿಚ್ಚು ? ಅದನ್ನು ಅಷ್ಟಕ್ಕೇ ಬಿಡುತ್ತೇನೆ. ಈಗ ಇದು ಈ ಪ್ರಶ್ನೆಗೆ ಸಂಬಂಧ ಪಡದೇ ಹೋದರೂ ನಮ್ಮ ಮಾದೇಗೌಡರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಅದರ ಬಗ್ಗೆ ತಾವು ಅವಕಾಶ ಕೊಟ್ಟರೆ ಎರಡು ಮಾತುಗಳನ್ನು ಹೇಳುತ್ತೇನೆ.

Because it is a general question and it does not arise out of the main question.

MR. SPEAKER. —It does not pertain to the main question.

ಶ್ರೀ ಮಾದೇಗೌಡ.—ಈಗ ಅಲ್ಲಿ ಸಾವಿರಾರು ಎಕರೆಗಳು... . ...

SRI D. DEVARAJ URS, —It is a general question and it does not arise out of the main question. But with your permission, I would like to say something. I think there is a Religious Inam Abolition Act and all those questions come under that Act. We are shortly bringing amendments to improve upon what the lacuna he has mentioned. We want to bring in some amendments whereby the Government's intention is to see that temples are in some way or the other are allowed to do worshipping and other th ngs which were there once in the village but which has been affected very badly as a result of this. We are trying to see that some annuity or some such thing is given if not the land and regarding the other point, what the hon. Member has stated is correct. In many instances. these Inam lands have been auctioned ; the usurps have been auctioned and those auctioned people who takes these lands are treated as tenants. We have to see that such people don't get the benefit but the actual cultivator get the benefit. We have considered all these aspects and we may bring any amendment perhaps in this Session itself.

Karnataka—Maharashtra Border issue

18. SRI MALLUR ANANDA RAO (Rajajinagar)—SRI B. V. KAKKILAYA (Vittal)-SRI PAMPAPATHI (Davanagere)—SRI S. F. BHAIRI (Shahabad)—Will the Chief Minister be pleased to state :—

(*a*) whether the Government is aware of the move by certain interested sections in Maharashtra to rake up the Karnataka-Maharashtra Border issue ;

(*b*) whether there is any change in the Policy of the Government towards this border issue ;

(*c*) what steps the Government has taken or would like to take to implement the Mahajan Commissions report ?

SRI D. DEVARAJ URS (Chief Minister).—

(*a*) No.

(*b*) No.

(*c*) It is for the Government of India to take action to implement the Mahajan Award.

ಶ್ರೀ ಮಳ್ಳೂರು ಆನಂದರಾವ್.—ನನ್ನ (ಎ) ಪ್ರಶ್ನೆಗೆ ತಾವು ಉತ್ತರವಾಗಿ ಇಲ್ಲ ಎಂಬುದಾಗಿ ಹೇಳಿದ್ದೀರಿ. ಆದರೆ ಮಹಾರಾಷ್ಟ್ರ ಗಡಿಪ್ರದೇಶದಲ್ಲಿ ಕೆಲವಾರು ಘಟನೆಗಳು ನಡೆಯುತ್ತಿವೆ. ಕಳೆದ ೩ ದಿವಸಗಳ ಹಿಂದೆ ಮಹಾರಾಷ್ಟ್ರದ ಅಸೆಂಬ್ಲಿಯಲ್ಲಿಯೂ ಈ ಪ್ರಶ್ನೆ ಬಂದಿದೆ. ಅದು ಪತ್ರಿಕೆಗಳಲ್ಲೂ ಬಂದಿದೆ. ತಾವು ಅದನ್ನು ಗಮನಿಸಿರಬಹುದು, ಇಷ್ಟೆಲ್ಲಾ ಆದರೂ ಇದರ ಬಗ್ಗೆ ಸರ್ಕಾರ ಏಕೆ ಎಚ್ಚರಿಕೆ ವಹಿಸಿಲ್ಲ? ಅಲ್ಲಿ ಏನು ಘಟನೆಗಳು ನಡೆಯುತ್ತಿದೆ ಎಂಬುದಕ್ಕೆ ಉತ್ತರ ಕೊಡಿ. ಮತ್ತು ನನ್ನ '(ಬಿ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂಬುದಾಗಿ ಹೇಳಿದ್ದೀರಿ. ಸರ್ಕಾರ ಇದರ ಬಗ್ಗೆ ಇಂಟರೆಸ್ಟ್ ಇಲ್ಲವೇ? ಸರ್ಕಾರ ಇದರ ಬಗ್ಗೆ ಮಹಾಜನ್ ವರದಿಯನ್ನು ಜಾರಿಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದೆ? ಏಕೆ ಸುಮ್ಮನೆ ಕುಳಿತುಕೊಂಡಿದೆ? ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆ?

† ಶ್ರೀ ಡಿ. ದೇವರಾಜ್ ಅರಸ್.—ನಾನು ಪತ್ರಿಕೆಯನ್ನೂ ಓದಿದ್ದೇನೆ. ನಾನು ಇಲ್ಲ ಎಂಬುದಾಗಿ ಹೇಳಿರುವುದಕ್ಕೆ ಕಾರಣ ಅದು ಅಧಿಕೃತವಾಗಿ ನಮಗೆ ಬಂದಿಲ್ಲ. ಇಷ್ಟೇ ವಿಚಾರ. ಪತ್ರಿಕೆಯಲ್ಲಿ ಗಲಾಟೆ ಮಾಡುತ್ತಿದ್ದಾರೆಂದು ಬಂದಿದೆ. ಅದೇ ರೀತಿಯಲ್ಲಿ ಪ್ರಧಾನ ಮಂತ್ರಿಗಳು ಉತ್ತರ ಹೇಳಿರುವುದನ್ನೂ ತಾವು ಗಮನಿಸಿರಬಹುದು. ಅವರು ತಮ್ಮ ಉತ್ತರದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಈ ಒಂದು ವಿಷಯದಲ್ಲಿ ನಾವು ಇದಕ್ಕೆ ಇಂಟರ್‌ಫಿಯರ್ ಆಗುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ಪತ್ರಿಕೆಯಲ್ಲಿ ಬಂದಿರುವುದನ್ನೂ ಓದಿದ್ದೇನೆ. ಪ್ರಧಾನ ಮಂತ್ರಿಗಳು ಕೊಟ್ಟ ಉತ್ತರ ಪತ್ರಿಕೆಯಲ್ಲಿ ಬಂದಿತ್ತು ಅದನ್ನೂ ಓದಿದ್ದೇನೆ. ಆದರೆ ಅದು ನಮಗೆ ಅಧಿಕೃತವಾಗಿ ಬಂದಿಲ್ಲ. ನಾನು ಇಲ್ಲಿ ಅಧಿಕೃತವಾಗಿ ಉತ್ತರ ಕೊಡುತ್ತಿರುವುದರಿಂದ ಇಲ್ಲ (ನೋ) ಎಂಬುದಾಗಿ ಹೇಳಿದ್ದೇನೆ ಅಷ್ಟೆ. ಮತ್ತೆ ಬಾರ್ಡರ್ ಡಿಸ್‌ಪ್ಯೂಟ್ ಬಗ್ಗೆ ನಮ್ಮ ಪಾಲಿಸಿ ಏನಾದರೂ ಬದಲಾವಣೆಯಾಗುವುದು ಇದೆಯೇ ಎಂಬುದಾಗಿ ಕೇಳಿದ್ದೀರಿ. ಅದಕ್ಕೆ ನಮ್ಮ ಪಾಲಿಸಿ ಬದಲಾವಣೆ ಇಲ್ಲ ಎಂಬುದಾಗಿ ಹೇಳಿದ್ದೇನೆ. ಇದಕ್ಕೆ ಕಾರಣ ಇಷ್ಟೆ. ಇದೇ ಮಾನ್ಯ ಸಭೆಯಲ್ಲಿ ಇದರ ಬಗ್ಗೆ ಈ ಹಿಂದೆ ಒಮ್ಮತದ ಒಂದು ಠರಾವು ಆಗಿದೆ. ಅದರಲ್ಲಿ ಮಹಾಜನ್ ವರದಿಯನ್ನು ಜಾರಿಗೆ ಕೊಡಬೇಕು, ನಾವು ಅದರ ಮೇಲೆ ಸ್ಟ್ರಿಕಾನ್ ಆಗಬೇಕು ಎಂದು ನಿರ್ಣಯ ಆಗಿದೆ. ೧೯೭೬ರ ಹಿಂದೆ ಈ ವಿಷಯ ಕೇಂದ್ರ ಸರ್ಕಾರದ ಮುಂದೆ ಬಂತು. ೧೯೭೪-೭೫ರಲ್ಲಿ ಇರಬಹುದು. ನನ್ನನ್ನು ಇದರ ಬಗ್ಗೆ ಏನಾದರೂ ಹೇಳಬೇಕೆಂದು ಆಗಿಂದಾಗ್ಗೆ ಕೇಳುತ್ತಲೇ ಇದ್ದರು. ನಾನು ಒಂದು ಹಂತದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಅದೇನೆಂದರೆ ನಮ್ಮ ವಿಧಾನ ಸಭೆಯು ಠರಾವು ಈ ರೀತಿ ಇದೆ. ಈ ಮಹಾಜನ್ ವರದಿಯನ್ನು ನಡೆಸುವಂತಹ ಕಾಲದಲ್ಲಿ ನಾವು ಈ ವರದಿಯನ್ನು ಮಾಡುವುದಕ್ಕೆ ಒಪ್ಪಬಾರದು ಎಂಬುದಾಗಿ ಹೇಳಿದ್ದಂತಹ ಜನ ನಾವು. ಕಮೀಷನ್ ನೇಮಕ ಮಾಡುವಂತಹ ಅಗತ್ಯ ಇರಲಿಲ್ಲ. ಆದರೂ ಅನೇಕ ಕಾರಣಾಂತರಗಳಿಂದ ಅದನ್ನು ಮಾಡಿದ್ದಾಯಿತು ಆದನ್ನು ಮಾಡುವ ಕಾಲದಲ್ಲೂ ಕಮೀಷನ್ ಯಾವುದನ್ನೇ ಮಾಡುವುದಾದರೂ ಉಭಯತ್ರರು ಕಮೀಷನ್ ಹೇಳಿದ ಪ್ರಕಾರ ಒಪ್ಪಬೇಕು ಎಂಬ ಅಂಡರ್‌ಸ್ಟಾಂಡಿಗೆ ಜಂಟ್ಲಮೆನ್ ಅಗ್ರಿಮೆಂಟ್ ಎಂಬುದಾಗಿ ನಾವು ಏನು ಹೇಳುತ್ತೇವೆ, ಆ ರೀತಿಯಾಗಿ ಒಪ್ಪಂದವಾಗಿತ್ತು, ಆದರೆ ಆ ವರದಿ ಬಂದಕೂಡಲೇ ಆ ವರದಿ ಚೆನ್ನಾಗಿಲ್ಲ, ಹಾಗಾಯಿತು, ಹೀಗಾಯಿತು ಎಂಬುದಾಗಿ ಹೇಳಿಕೊಂಡು ಮಹಾರಾಷ್ಟ್ರದವರು ಗಲಾಟೆ ಮಾಡುವುದಕ್ಕೆ ಹೊರಟರು. ಆಗಿನಿಂದಲೂ ಗಲಾಟೆ-ಗಲಾಟೆ ನಡೆಯುತ್ತಿದೆ. ಅದಕ್ಕೆ ನಾನು ಒಂದು ಸ್ಟೇಜಿನಲ್ಲಿ ಅಂದರೆ ೧೯೭೫-೭೬ರಲ್ಲಿ ಇರಬಹುದು ನನಗೆ ಜ್ಞಾಪಕ ಇಲ್ಲ, ಇದರ ಬಗೆ ಪಬ್ಲಿಕ್ ಸ್ಟೇಟ್‌ಮೆಂಟ್ ಕೂಡ ಕೊಟ್ಟೆ. ನಾನು ಏನು ಹೇಳಿದ್ದೇನೆಂದರೆ ಈ ಮಹಾಜನ್ ಕಮಿಷನ್ ಕೊಟ್ಟಿರತಕ್ಕಂಥ ವರದಿಯನ್ನು ಜಾರಿಗೆ ಕೊಡಬೇಕು. ನಾವು ಈ ಹಿಂದೆ ಮಹಾಜನ್ ಕಮಿಷನ್ ಕೊಡುವ ತೀರ್ಮಾನಕ್ಕೆ ಉಭಯತ್ರರೂ ಒಪ್ಪಂದವಾಗಿದ್ದ ಪ್ರಕಾರ ಮತ್ತು ಎ.ಐ.ಸಿ.ಸಿ. ವರ್ಕಿಂಗ್ ಕಮಿಟಿಯಲ್ಲಿ ಈ ಕಮಿಷನ್‌ನ್ನು ಮಾಡುವಂತಹ ಕಾಲದಲ್ಲಿ ಏನೇನು ಮಾತನಾಡಿದ್ದೇವೆ ಆ ಮಾತಿನ ಪ್ರಕಾರ ಈ ಮಹಾಜನ್ ಕಮಿಷನ್ ವರದಿಯನ್ನು ಜಾರಿಗೆ ಕೊಟ್ಟರೆ ನನ್ನ ಅಭ್ಯಂತರವಿಲ್ಲ. ಅದನ್ನು ಬಿಟ್ಟು ಹೆಚ್ಚು ಮಾಡಿ, ಕಡಿಮೆ ಮಾಡಿ ಹೀಗೆ ಹಾಗೆ ಎಂಬುದಾಗಿ ಹೇಳುವುದು ಬೇಡ. ಮಹಾಜನ್ ಕಮಿಷನ್ ವರದಿಯನ್ನು ಜಾರಿಗೆ ಕೊಡುವುದಿದ್ದರೆ ಕೊಡಲಿ ಇಲ್ಲದಿದ್ದರೆ ನಾವು ಈಗ ಹೇಗೆ ಇದ್ದೇವೆಯೋ ಹಾಗೆ ಇರೋಣ. ಹೀಗೆ ನಾನು ಹೇಳಿದ್ದೇನೆ. ಇದರಲ್ಲಿ ಒಂದು ಇಂಚ್ ಕೂಡ ಬದಲಾವಣೆ ಇಲ್ಲ. ಮುಂದೆಯೂ ಆಗುವುದಿಲ್ಲ ಇದು ವಿಚಾರ. ಆದ್ದರಿಂದ ತಾವು ಈಗ ಏನು ಕೇಳಿದ್ದೀರಿ, ಅಲ್ಲಿ ಕೂಗಾಡುತ್ತಿದ್ದಾರೆ, ಗಲಾಟೆ ಮಾಡುತ್ತಿದ್ದಾರೆಂದು, ಅವರು ಕೂಗಾಡಲಿ. ನಮ್ಮ ಮಾನ್ಯ ಮಿತ್ರರು ಗರಡಿ ಮಾಡಿದ್ದಾರೆಂದು ಭಾವಿಸುತ್ತೇನೆ. ಅಲ್ಲಿ ತೊಡೆ ತಟ್ಟುತ್ತಾರೆ, ಭಸ್ಕಿ ಹೊಡೆಯುತ್ತಾರೆ, ಆದರೆ ಗರಡಿ ಬರುವವನು ಸುಮ್ಮನೆ ನಿಂತುಕೊಂಡಿರುತ್ತಾನೆ ಸರಿಯಾದಂತಹ ಟೈಮ್ ಸಿಕ್ಕಿದಾಗ ಒಂದು ಪಟ್ಟು

ಹಾಗುತ್ತಾನೆ. ಅದರಂತೆ ನಾನು ಸಮಯ ಸಿಕ್ಕಿದಾಗ ಪಟ್ಟು ಹಾಕುತ್ತೇನೆ. ಅವರು ಕೂಗಾಡುತ್ತಿದ್ದರೆ ಕೂಗಾಡಲಿ.

ಶ್ರೀ ಬಿ.ವಿ. ಕಕ್ಕಿಲಾಯ.—ಸ್ವಾಮಿ, ಈ ವರದಿಯನ್ನು ಜಾರಿಗೆ ಕೊಡುವ ಕೆಲಸ ಕೇಂದ್ರ ಸರ್ಕಾರಕ್ಕೆ ಸೇರಿದ್ದು ಎಂದು ಇಲ್ಲಿ ಉತ್ತರಕೊಟ್ಟಿದ್ದಾರೆ. ಅದು ನ್ಯಾಯವಾದುದು ಈ ವಿಚಾರದಲ್ಲಿ ಎರಡು ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮತಮ್ಮಲ್ಲಿಯೇ ಮಾತನಾಡುವುದು ಒಳ್ಳೆಯದೆಂದು ಇತ್ತೀಚೆಗೆ ಪ್ರಧಾನಮಂತ್ರಿಗಳು ಬಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ ಈ ವರದಿಯಲ್ಲಿ ಈ ಎರಡು ರಾಜ್ಯಗಳ ಪ್ರಶ್ನೆ ಮಾತ್ರ ಇಲ್ಲ, ಕೇರಳ ಮತ್ತು ಕರ್ನಾಟಕದ ಪ್ರಶ್ನೆ ಕೂಡ ಇದೆ. ಈ ವರದಿಯನ್ನು ಜಾರಿಗೆ ಕೊಡಬೇಕೆಂದು ಈ ಸದನದಲ್ಲಿಯೇ ಒಪ್ಪಿಕೊಂಡಿದ್ದೇವೆ. ಆದಕಾರಣ ತಾವು ಈ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೀರಾ ಹೇಗೆ?

ಇನ್ನು ಎರಡನೇ ಪ್ರಶ್ನೆಯಿದೆಯಲ್ಲ, ನಮ್ಮ ರಾಜ್ಯಾಂಗದ ೩೦ನೇ ವಿಧಿಯ ಪ್ರಕಾರ ಅಲ್ಪಸಂಖ್ಯಾತರು ಏನಿದ್ದಾರೆ, ಅವರು ವಿದ್ಯಾಸಂಸ್ಥೆಗಳನ್ನು ನಡೆಸಲು ಸಂಪೂರ್ಣವಾದ ಹಕ್ಕು ಅವರಿಗಿದೆ. ಸರ್ಕಾರ ಈ ಸಂಸ್ಥೆಗಳಿಗೆ ಗ್ರಾಂಟ್ ಕೊಡದಿದ್ದರೆ ಅಲ್ಲಿನ ಆಡಳಿತದಲ್ಲಿ ಮಧ್ಯೆ ಪ್ರವೇಶ ಮಾಡಬಾರದೆಂದು ಅದರಲ್ಲಿ ಹೇಳಿದೆ. ಈಗ ಈ ವರದಿಯ ಪ್ರಕಾರ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕಾಗಿದೆ. ಈ ಕಾರಣದಿಂದ ಅಲ್ಲಿ ಕನ್ನಡವನ್ನು ಕಲಿಸುವಂತಹ ಶಾಲೆಗಳಲ್ಲಿ, ಕನ್ನಡಿಗರೇ ಮೇನೇಜ್‌ಮೆಂಟ್ ಮಾಡುವ ಶಾಲೆಗಳಲ್ಲಿ ಕನ್ನಡವನ್ನು ಕಲಿಸುವುದಕ್ಕೆ ಆತಂಕವಾಗುವ ರೀತಿಯಲ್ಲಿ ಅನೇಕ ತರಹದ ಕಿರುಕುಳವನ್ನು ಕೊಡುತ್ತಿದ್ದಾರೆ ತಮಗೂ ಸಹ ಈ ಬಗ್ಗೆ ದೂರುಗಳು ಬಂದಿರಬಹುದು, ಆದಕಾರಣ ಇದನ್ನು ಕೇಂದ್ರಸರ್ಕಾರದ ಗಮನಕ್ಕೆ ತಂದು ಮಹಾಜನ್ ವರದಿಯನ್ನು ಪಾರ್ಲಿಮೆಂಟಿನಲ್ಲಿ ಬೇಗ ಚರ್ಚೆ ಮಾಡಿ ಬೇಗ ತೀರ್ಮಾನ ಮಾಡುವಂತೆ ಸರ್ಕಾರದ ಪರವಾಗಿ ಕೇಂದ್ರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ನಾನು ಮಹಾಜನ್ ವರದಿಯನ್ನು ಓದಿದ್ದೇನೆ. ಆದರಲ್ಲಿ ಕಾಸರಗೋಡಿನ ಬಗ್ಗೆ ಏನಿದೆ ಎಂಬುದು ಒಂದು ಕಡೆ ಇರಲಿ, ಮಹಾಜನ್ ವರದಿಯನ್ನು ಜಾರಿಗೆ ಕೊಡುವುದಿಲ್ಲವೆಂದು ಅವರು ಸುಮ್ಮನಿದ್ದರೆ ನಮ್ಮರಾಜ್ಯಕ್ಕೆ ನನ್ನಅಭಿಪ್ರಾಯದಲ್ಲಿ ಕಾಸರಗೋಡಿನ ಪ್ರಶ್ನೆ ವಿಚಾರದಲ್ಲಿ ಅನುಕೂಲವೂ ಇದೆ, ಅನಾನುಕೂಲವು ಇದೆ. ಆದರೂ ನಾವು ಹಿಂದೆ ಮಾತು ಕೊಟ್ಟಿದ್ದೇವೆ. ಆದಕಾರಣ ಹಿಂದಕ್ಕೆ ಹೋಗಬಾರದೆಂದು ನಾವು ಅದಕ್ಕೆ ಸ್ಟಿಕಾನ್ ಆಗಿದ್ದೇವೆ. ಮಾನ್ಯ ಕಕ್ಕಿಲಾಯ ಅವರು ಹೇಳಿದಂತೆ ಕಾಸರಗೋಡಿನಲ್ಲಿ ಅನೇಕ ಘಟನೆಗಳು ನಡೆದಿವೆ. ನನಗೂ ಸಹ ದೂರುಗಳು ಬಂದಿವೆ ನಾನು ಬೊನ್ನೆ ಕೇರಳಾದ ಮುಖ್ಯಮಂತ್ರಿಗಳು ಮದ್ರಾಸಿಗೆ ಬಂದಿದ್ದಾಗ ಅವರ ಜೊತೆಯಲ್ಲಿ ಈ ಬಗೆ ಮಾತನಾಡಿದ್ದೇನೆ. ಅವರು ಸರಿಪಡಿಸುತ್ತೇನೆಂದು ಭರವಸೆ ಮಾಡಿಕೊಟ್ಟಿದ್ದಾರೆ. ಇಲ್ಲಿರತಕ್ಕಂಥ ಮೈನಾರಿಟೀಸ್ ಇನ್ಸ್‌ಟಿಟ್ಯೂಷನ್‌ಗಳಿಗೆ ನಾವು ಮಾನ್ಯತೆ ಕೊಡಬೇಕಾಗುತ್ತದೆ, ಅದರಂತೆ ಅಲ್ಲಿರತಕ್ಕಂಥ ಮೈನಾರಿಟೀಸ್ ಇನ್ಸ್‌ಟಿಟ್ಯೂಷನ್‌ಗಳಿಗೆ ಅವರೂ ಸಹ ಮಾನ್ಯತೆ ಕೊಡಬೇಕು, ಪ್ರೊಟೆಕ್ಷನ್ ಕೊಡಬೇಕು, ಈಗ ಅವರಿಗೆ ಸ್ವಲ್ಪ ಅವಕಾಶ ಕೊಟ್ಟಿದ್ದೇನೆ. ಅವರೇನಾದರೂ ಸರಿಪಡಿಸಲಿಲ್ಲವೆಂದರೆ ಖಂಡಿತವಾಗಿ ನಾನು ಕೇಂದ್ರಸರ್ಕಾರಕ್ಕೆ ಬರೆಯುತ್ತೇನೆ. ಮತ್ತು ಕೇಂದ್ರಸರ್ಕಾರದ ಗಮನಕ್ಕೆ ತರುತ್ತೇನೆ. ಒಟ್ಟಿನಲ್ಲಿ ಇದನ್ನು ಸರಿಪಡಿಸುವುದಕ್ಕೆ ಏನಂ ಪ್ರಯತ್ನ ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಈ ಮಹಾಜನ್ ವರದಿಯ ಬಗ್ಗೆ ಕೊಟ್ಟ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. ಮತ್ತು ನಮ್ಮ ಪ್ರಧಾನಿಗಳು ಈ ಬಗ್ಗೆ ಉಭಯ ರಾಜ್ಯಗಳ ಒಪ್ಪಿಗೆಯಿಲ್ಲದೆ ಕೇಂದ್ರ ತನ್ನ ವಿಚಾರವನ್ನು ಒತ್ತಾಯದಿಂದ ಹೇರುವುದಕ್ಕೆ ಬಯಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದಕಾರಣ ಅವರ ಹೇಳಿಕೆಯನ್ನು ಸಹ ನಾನು ಸ್ವಾಗತ ಮಾಡುತ್ತೇನೆ. ಆದರೆ ಒಂದು ವಿಚಾರವನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಮಾನ್ಯ ಕಕ್ಕಿಲಾಯ ಅವರು ಹೇಳಿದಂತೆ ಗಡಿ ಪ್ರದೇಶಗಳಲ್ಲಿರತಕ್ಕಂಥ ಕನ್ನಡಿಗರಿಗೆ ಆಗುತ್ತಿರುವ ತೊಂದರೆಗಳನ್ನು ನಾವು ಇಲ್ಲಿ ಪದೇಪದೇ ಹೇಳುತ್ತಿದ್ದೇವೆ. ಮಹಾಜನ್ ಕಮಿಷನ್ ರಚನೆ ಮಾಡುವ ಸಂದರ್ಭದಲ್ಲಿ ಕೇರಳಾದಲ್ಲಿ ಪ್ರೆಸಿಡೆಂಟ್ ರೂಲ್ ಇತ್ತು ಅದಕ್ಕಾಗಿ ಅವರು ಕೊಟ್ಟ ವರದಿಗೆ ನಾವು ಬಂಧನಕಾರಿಯಲ್ಲವೆಂದು ಅಲ್ಲಿನ ಸರ್ಕಾರದವರು ಹೇಳುತ್ತಾರೆ. ಈ ಕಾರಣದಿಂದ ಅಲ್ಲಿಯ ಕನ್ನಡಿಗರಿಗೆ ಆಗಿರುವ ತೊಂದರೆಗಳನ್ನು ಸಂಬಂಧಪಟ್ಟ ಮುಖ್ಯಮಂತ್ರಿಗಳಿಗೆ ತಿಳಿಸಿ, ಕಾಸರಗೋಡು, ವಂಡಕಶಿರ ಮುಂತಾದ ಕನ್ನಡ ಭಾಗಗಳನ್ನು ನಮ್ಮ ಕರ್ನಾಟಕಕ್ಕೆ ತೆಗೆದುಕೊಳ್ಳುವ ಬಗ್ಗೆ ಅಲ್ಲಿಯ ಮುಖ್ಯಮಂತ್ರಿಗಳೊಡನೆ ಆಪ್ತಾಲೋಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

SRI D. DEVARAJA URS.—Sir, it is a good suggestion. I will have a talk with the Chief Ministers concerned. Let us see where it will lead us.

ಶ್ರೀ ಮಳ್ಳೂರು ಆನಂದರಾವ್.—ಕೇಂದ್ರಸರ್ಕಾರದವರು ಇದನ್ನು ತೀರ್ಮಾನ ಮಾಡಬೇಕೆಂದು ತಾವು ಹೇಳುತ್ತೀರಿ, ಅವರವರೇ ಇದನ್ನು ಬಗೆಹರಿಸಿಕೊಳ್ಳಲಿ ಎಂದು ಪ್ರಧಾನಮಂತ್ರಿಗಳು ಹೇಳುತ್ತಾರೆ. ಅಂದರೆ ಈ ಒಂದು ಅನಿಶ್ಚತೆ ಎಷ್ಟು ದಿವಸ ಮುಂದುವರೆಯಬೇಕು? ಈಗ ಗಡಿ ಪ್ರದೇಶದಲ್ಲಿ ಗೊಂದಲವಿದ್ದಿದೆ. ಮಹಾರಾಷ್ಟ್ರದ ಒಂದು ಕಮಿಟಿಯವರು ಬೆಳಗಾಂನಲ್ಲಿರತಕ್ಕಂಥ ಕನ್ನಡ ಡೆವಲಪ್‌ಮೆಂಟ್ ಆಫೀಸ್‌ಗೆ ನುಗ್ಗಿ ಎಲ್ಲವನ್ನೂ ಧ್ವಂಸ ಮಾಡಿದ್ದಾರೆ. ಅದಕ್ಕೋಸ್ಕರ ಕೇಂದ್ರಸರ್ಕಾರದ ಮೇಲೆ ತಾವು ಒತ್ತಾಯ ತರಬೇಕು. ಬೇರೆ ಸರ್ಕಾರಗಳು ಸಹ ಮಾಡುತ್ತಿರುವುದರಿಂದ, ನಮಗೆ ದಾರಿ ಸುಗಮವಾಗಿದೆ. ಈ ಸಭೆಯ ಸದಸ್ಯರನ್ನು ಅಂದರೆ ಆಲ್-ಪಾರ್ಟಿಡೆಲಿಗೇಷನ್ನನ್ನು ತಮ್ಮ ಒಂದು ನೇತೃತ್ವದಲ್ಲಿ ಕರೆದುಕೊಂಡು ಹೋಗಿ ಕೇಂದ್ರಸರ್ಕಾರವನ್ನು ಒಪ್ಪಿಸುವಂತಹ ಪ್ರಯತ್ನ ಮಾಡಬೇಕು. ನಾನು ೬ ವರ್ಷಗಳ ಕಾಲ ಗಡಿಮನೆಯಲ್ಲಿ ಪಳಗಿದ್ದೇನೆ ಅವರು ದೂರದಲ್ಲಿದ್ದಾರೆ. ಹತ್ತಿರ ಬಂದಾಗ ಸರಿಯಾದ ಪಟ್ಟನ್ನು ಹಾಕಿ ಬೀಳಿಸುವುದು ಬೇರೆ ವಿಚಾರ. ಆದರೆ ಅವರು ಈಗ ನಮ್ಮ ಮೈಮೇಲೆ ಬೀಳುತ್ತಿದ್ದಾರೆ. ಈಗಲೂ ನಾವು ಸುಮ್ಮನಿದ್ದರೆ ಅದು ನಮ್ಮ ವೀಕ್‌ನೆಸ್ ಎಂದು ಅವರು ತಿಳಿದುಕೊಳ್ಳುತ್ತಾರೆ. ಆದಕಾರಣ ಈ ಒಂದು ಅನಿಶ್ಚತೆಯನ್ನು ಹೋಗಲಾಡಿಸಲು ಪ್ಲೈವ್ಹಾನ್ ಪಟ್ಟು ಹಾಕುವುದಕ್ಕೆ ಇದು ಒಳ್ಳೆಯ ಸಮಯವಾಗಿದೆ. ಆದಕಾರಣ ನಾನು ಹೇಳಿದಂತೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ನೀವು ಒಳ್ಳೆಯ ಪ್ಲೈವ್ಹಾನರಿದ್ದೀರಿ. ಆದರೆ ನಮ್ಮ ಪಟ್ಟು ಏನೆಂಬುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಅರ್ಥ ಮಾಡಿಕೊಂಡಿದ್ದಾರೆ. ಆದಕಾರಣ ನೀವು ಈ ಪ್ರಶ್ನೆಯನ್ನು ಅಲ್ಲಿಗೇ ಬಿಡಿ. ಮುಂದೆ ಏನು ಮಾಡಬೇಕೆಂಬುದು ನನಗೆ ಗೊತ್ತಿದೆ.

ಶ್ರೀ ಎಂ. ವಿ. ರಾಜಶೇಖರನ್.—ಕಾಸರಗೋಡಿನಲ್ಲಿರತಕ್ಕಂಥ ಕನ್ನಡ ಶಾಲೆಗಳ ಬಗ್ಗೆ ನಾನು ಸಹ ಒಂದು ಕಾಲ್-ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಈಗಾಗಲೇ ಮುಖ್ಯಮಂತ್ರಿಗಳು ಕೇರಳ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆಂದು ಹೇಳಿದರು. ಈಗ ಅಲ್ಲಿ ನಮ್ಮ ಪಡುಮಾರು ಮಠದ ಸ್ವಾಮಿಗಳು ನಡೆಸುತ್ತಿರುವ ಹೈಸ್ಕೂಲನ್ನು ಅಲ್ಲಿಯ ಪುಂಡು ಜನರು ಮುಚ್ಚಿಸಿದ್ದಾರೆ. ಅದನು ಮತ್ತೆ ಪ್ರಾರಂಭ ಮಾಡುವ ಬಗ್ಗೆ ತಾವು ತಕ್ಷಣವೇ ಪ್ರಯತ್ನ ಮಾಡಬೇಕು. ಈಗ ಅಲ್ಲಿರತಕ್ಕಂಥ ಕನ್ನಡದ ಮಕ್ಕಳಿಗೆ ತೊಂದರೆಯಾಗಿದೆ. ಆದಕಾರಣ ಈ ಬಗ್ಗೆ ಅಲ್ಲಿಯ ಮುಖ್ಯಮಂತ್ರಿಗಳ ಜೊತೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

SRI D. DEVARAJ URS.—I am glad that they have brought this here I have taken note of this. I will certainly act promptly and see how best we can solve that problem.

MR. SPEAKER.—Now Question hour is over

QUESTIONS FOR ANSWERS ON THE DAY

(but not taken up)

Buildings for High School in Gubbi Halekote and Theranya in Holenarasipur Taluk.

64 SRI H. D. DEVE GOWDA (Holenarasipur).—Will the Minister for Education be pleased to state.—

(*a*) whether it has come to the notice of Government that there is no building accommodation for the Government High Schools (at Halekote, Gubbi and Theranya) in Holenarasipura Taluk ;